3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.
ಸಿ.ಸಿ.ಸಂಖ್ಯೆ699/2019

ಫಿರ್ಯಾದುದಾರರುಃ-  ಸರ್ಕಾರದ ಪರವಾಗಿ ಬೀರೂರು ಪೊಲೀಸರು

ವಿರುದ್ಧ

ಆರೋಪಿತರುಃ-  ಹೇಮಂತ  ಮತ್ತು ಇನ್ನೊಬ್ಬರು

ದೋಷಾರೋಪಣೆ

ಶ್ರೀ ದೀಪು ಎಂ.ಟಿ., ಬಿ.ಎ., ಎಲ್. ಎಲ್.ಎಲ್.ಬಿ., 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ಹೇಮಂತ ಬಿನ್ ನಾಗಪ್ಪ ಯಾನೆ ನಾಗರಾಜಪ್ಪ, 26 ವರ್ಷ, ಕೂಲಿ ಕೆಲಸ, ವಾಸಃಹಿರೇನಲ್ಲೂರು ಗ್ರಾಮ, ಕಡೂರು ತಾಲ್ಲೂಕು,
2. ಯೋಗೇಂದ್ರ ಬಿನ್ ಲಕ್ಷ್ಮಪ್ಪ, 33 ವರ್ಷ, ಕೂಲಿ ಕೆಲಸ, ವಾಸಃಹಿರೇನಲ್ಲೂರು ಗ್ರಾಮ, ಕಡೂರು ತಾಲ್ಲೂಕು,

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕಃ 21-06-2017 ರಂದು ಸಂಜೆ 5-30 ಗಂಟೆ ಸಮಯದಲ್ಲಿ ಬೀರೂರು ಠಾಣಾ ವ್ಯಾಪ್ತಿಗೆ ಸೇರಿದ ಹಿರೇನಲ್ಲೂರು ಗ್ರಾಮದ ಬ್ರಾಂಡಿ ಶಾಪ್ ಹತ್ತಿರ ಚಾ.ಸಾ.2 ಚಂದ್ರಪರವರು ಇದ್ದಾಗ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಬಂದು ಚಾ.ಸಾ.2 ರವರನ್ನು ಬ್ರಾಂಡಿ ಶಾಪ್ ನ ಎದುರಿಗೆ ಇರುವ ತಿಮ್ಮಣ್ಣನ ಹೋಟೇಲ್ ಹಿಂಭಾಗಕ್ಕೆ ಕರೆದುಕೊಂಡು ಹೋಗಿ, ಹಣಕಾಸಿನ ವಿಚಾರದಲ್ಲಿ ಜಗಳ ತೆಗೆದು, ಅವರು ಅಪರಾಧ ಮಾಡುವಂತೆ ಪ್ರಚೋಧಿಸುವ ಸಲುವಾಗಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟು ಮಾಡಿರುತ್ತೀರಿ ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ಸಹಕಲಂ 34 ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-2 ರವರೊಂದಿಗೆ ಮೇಲೆ ಹೇಳಿದ ವಿಚಾರದಲ್ಲಿ ಜಗಳ ತೆಗೆದು, 1 ನೇ ಆರೋಪಿಯಾದ

ನೀವು ಮಾರಕಾಸ್ತ್ರವಾದ ಇಟ್ಟಿಗೆ ತುಂಡಿನಿಂದ ಚಾ.ಸಾ.2 ರವರ ತಲೆಯ ಹಿಂಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 324 ಸಹಕಲಂ 34 ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-2 ರವರೊಂದಿಗೆ ಮೇಲೆ ಹೇಳಿದ ವಿಚಾರದಲ್ಲಿ ಜಗಳ ತೆಗೆದು, 2 ನೇ ಆರೋಪಿಯಾದ ನೀವು ಮಾರಕಾಸ್ತ್ರವಾದ ಗಾಜಿನ ಬಾಟಲಿಯಿಂದ ಚಾ.ಸಾ.2 ರವರ ಎದೆಗೆ, ಬೆನ್ನಿಗೆ, ಮತ್ತು ಎಡಕೈ ಕಿರುಬೆರಳಿಗೆ ಹೊಡೆದು ಬೆನ್ನಿಗೆ ಸಾಮಾನ್ಯ ಸ್ವರೂಪದ ಗಾಯವನ್ನು ಹಾಗೂ ಎಡ ಕಿರುಬೆರಳಿಗೆ ಗಂಬೀರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 326 ಸಹಕಲಂ 34 ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ನೀವು ಚಾಸಾ-2 ರವರೊಂದಿಗೆ ಮೇಲೆ ಹೇಳಿದ ವಿಚಾರದಲ್ಲಿ ಜಗಳ ತೆಗೆದು, ಅವರಿಗೆ ನಿನ್ನನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿ ಅಪರಾಧಿಕಾ ಭಯೋತ್ಪಾಧನೆಯನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 506 ಸಹಕಲಂ 34 ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ **31.07.2019**

ಸಹಿ/-

**(ದೀಪು ಎಂ.ಟಿ.),**

3 ನೇ ಹೆಚ್ಚುವರಿ ಪ್ರದನ್ಯಾದಂ ಕಡೂರು.